ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

ಮೊದಲನೆಯ ಆವರ್ತಕ ಪರೀಕ್ಷೆ ಆಗಸ್ಟ್ –೨೦೨೦

ತರಗತಿ : ೫ ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : ೨೦

(Use KANNADA H W Note Book to ANSWER)

ವಿಭಾಗ – ಅ (ವಾಚನ ಮತ್ತು ಗ್ರಹಣ ಕೌಶಲ)

೧) ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅರ್ಥೈಸಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ: ೧X೩=೩

ಡಾ. ಜಾಕೀರ್ ಹುಸೇನರು ಭಾರತೀಯ ಶಿಕ್ಷಣದ ಅಭಿವೃದ್ಧಿ ಹಾಗೂ ಸುಧಾರಣೆಯ ಕುರಿತಂತೆ ಹಲವು ಪುಸ್ತಕಗಳನ್ನು ಬರೆದವರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಬಿಹಾರದ ರಾಜ್ಯಪಾಲರಾಗಿ, ಭಾರತದ ಉಪರಾಷ್ಟ್ರಪತಿಗಳಾಗಿ, ಅನಂತರ ರಾಷ್ಟ್ರಪತಿಗಳಾಗಿ ದುಡಿದವರು. ಕೆಲಕಾಲ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು.

ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ ಉನ್ನತ ಶಿಕ್ಷಣಕ್ಕೆ ಹೆಸರಾದ ಸಂಸ್ಥೆ. ಅದರ ಸ್ಥಾಪಕರು ಡಾ. ಜಾಕೀರ್ ಹುಸೇನರು. ಅವರು ಶಿಸ್ತು ಮತ್ತು ಶುಚಿಗೆ ಅಪಾರ ಮಹತ್ವ ನೀಡುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳಿಗೂ ಅದನ್ನೇ ಹೇಳುತ್ತಿದ್ದರು. ಆದರೆ ಎಷ್ಟೋ ವಿದ್ಯಾರ್ಥಿಗಳು ಅವರ ಮಾತುಗಳನ್ನು ಸರಿಯಾಗಿ ಪಾಲಿಸುತ್ತಿರಲಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಒಂದು ದಿನ ವಿಶ್ವವಿದ್ಯಾನಿಲಯದ ಪ್ರವೇಶದ್ವಾರದಲ್ಲಿ ಜಾಕೀರ್ ಹುಸೇನರು ಒಬ್ಬ ಬೂಟ್ ಪಾಲಿಶ್ ಮಾಡುವವನ ವೇಷದಲ್ಲಿ ಕುಳಿತ್ತಿದ್ದು ವಿದ್ಯಾರ್ಥಿಗಳ ಗಮನಕ್ಕೆ ಬಂತು. ಅಂದಿನಿಂದ ವಿದ್ಯಾರ್ಥಿಗಳು ನೀಟಾಗಿ ಬಟ್ಟೆ ಹಾಕಿಕೊಂಡು ಬೂಟುಗಳಿಗೆ ಪಾಲಿಶ್ ಹಾಕಿಕೊಂಡು ಕಾಲೇಜಿಗೆ ಬರತೊಡಗಿದರು.

ಪ್ರಶ್ನೆಗಳು : ೧) ಡಾ. ಜಾಕೀರ್ ಹುಸೇನರು ಯಾವ ರಾಜ್ಯದ ರಾಜ್ಯಪಾಲರಾಗಿದ್ದರು?

೨) ಜಾಮಿಯಾ ಮಿಲಿಯ ಎಲ್ಲಿದೆ?

೩) ಡಾ. ಜಾಕೀರ್ ಹುಸೇನರು ಮಕ್ಕಳಿಗೆ ಬುದ್ಧಿ ಕಲಿಸಲು ಯಾವ ವೇಷ ಹಾಕಿದ್ದರು?

ವಿಭಾಗ – ಆ (ಅನ್ವಯಿಕ ವ್ಯಾಕರಣ)

೨) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ :

ಅ) ಕೊಟ್ಟಿರುವ ವಾಕ್ಯದಲ್ಲಿ ಖಾಲಿ ಬಿಟ್ಟಿರುವ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ : ೧X೩=೩

೧) ಬೇವಿನ ಮರವನ್ನು ಜನ _____ ಎಂದು ಕರೆಯುತ್ತಿದ್ದರು.

೨) ನಾವಿಬ್ಬರೂ ಒಬ್ಬರಿಂದ ಒಬ್ಬರು _____ ಜನರು ನಮ್ಮಿಬ್ಬರನ್ನು ನಾಶಮಾಡುತ್ತಾರೆ.

೩) "ಇದು ಅಮ್ಮನ ಮರ _____ ಬೇಡ" ಎಂದು ಹೊರಟು ಹೋದರು.

ಆ) ಕೆಳಗಿನ ಅಕ್ಷರಗಳನ್ನು ಕೂಡಿಸಿ ಬರೆಯಿರಿ : ೧X೩=೩

೧) ಚ್ +ಅ+ ಳ್+ ಉ +ವ್+ ಅ +ಳ್ +ಇ೨) ಹ್+ ಇ+ ಮ್ +ಆ+ ಲ್+ ಅ +ಯ್ +ಅ

೩) ಸ್+ಅ+ ರ್+ ಓ+ ವ್ +ಅ+ ರ್+ ಅ

ಇ) ಕೆಳಗಿನ ಅಕ್ಷರಗಳನ್ನು ಬಿಡಿಸಿ ಬರೆಯಿರಿ : ೧X೩=೩

೧) ರಾಜಧಾನಿ ೨) ಸಹಕಾರ ೩) ಭಯಾನಕ

ವಿಭಾಗ – ಇ (ಪಠ್ಯಗಳ ಅಧ್ಯಯನ)

ಅ) ಕೊಟ್ಟಿರುವ ಪದ್ಯವನ್ನು ಪೂರ್ಣಗೊಳಿಸಿರಿ : ೨X೧=೨

ಎಲ್ಲಿ ಭೂರಮೆ _____

_____

_____ಕಳೆವಳೋ?

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ : ೧X೪=೪

೧) ಗುಂಡನೆಯ ಕಲ್ಲು ಎಲ್ಲಿತ್ತು?

೨) ಕಾವೇರಿಯ ತವರ್ಮನೆ ಯಾವುದು?

೩) ಕಲ್ಲು ಹೊಡೆಯುವವರು ಏನೆಂದು ಹೇಳಿ ಹೊರಟು ಹೋದರು?

೪) ಸೋಲ್ ಸಾವರಿಯದವರು ಯಾರು?

ಇ) ಕೆಳಗಿನ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿರಿ (ಬೇಕಾದ ಒಂದಕ್ಕೆ ಮಾತ್ರ): ೨X೧=೨

೧) ಜಂಬದಿಂದ ಅಮ್ಮನ ಕಲ್ಲು ಬೇವಿನ ಮರಕ್ಕೆ ಏನೆಂದು ಹೇಳಿತು?

೨) ಬೇರೆ ಬೇರೆಯಾಗಿದ್ದ ಬೇವಿನ ಮರ ಮತ್ತು ಕಲ್ಲನ್ನು ನೋಡಿ ರೈತನು ತನ್ನ ಮಕ್ಕಳಿಗೆ ಏನು ಹೇಳಿದನು?

*****

SEND THE PHOTO or PDF of this ANSWER SHEET to

PRAKASH K Sir on 9663337478